· ಜೆ.ವಿ. ಕಲ್ಲಾಪುರ

ಕೊಂಕಣ ಮಠದವರ ನಿರೂಪಗಳು

ಕೆಳದಿ ಐತಿಹಾಸಿಕ ದಾಖಲೆಗಳ ಸರ್ವೇಕ್ಷಣೆಯ ಸಂದರ್ಭದಲ್ಲಿ ಮದ್ರಾಸಿನ ಗೌರ್ನಮೆಂಟ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ ಲೈಬ್ರರಿಯಲ್ಲಿನ ಮೆಕಂಜಿ[1] ಸಂಗ್ರಹದಲ್ಲಿ ಕಂಡುಬಂದ ನಿರೂಪಗಳು ಕೆಳದಿ ಅರಸರಿಗೆ ಸಂಬಂಧಿಸದ್ದಾಗಿದ್ದು, ಅವುಗಳನ್ನು ಈ ಪ್ರಬಂಧದಲ್ಲಿ ಮೂಲಪಾಠದೊಂದಿಗೆ ಸಂಗ್ರಹಿಸ ಲಾಗಿದೆ. ಈ ಸಂಗ್ರಹದಲ್ಲಿ ಒಟ್ಟು ಮೂರು ನಿರೂಪಗಳಿದ್ದು ಮೊದಲನೆ ಎರಡು ಕೆಳದಿ ಚೆನ್ನಮ್ಮಾಜಿಗೂ, ಕೊನೆಯದು ಕೆಳದಿ ಸೋಮಶೇಖರ ನಾಯಕನಿಗೂ ಸಂಬಂಧಿಸದ್ದಾಗಿದೆ. ಮೊದಲನೆಯದು ರಾಮಪ್ಪನೆಂಬುವನು ಮುಗುವಿನ ಶೀಮೆಯಲ್ಲಿ ಕಟ್ಟಿಸಿದ ವೆಂಕಟೇಶ ದೇವಸ್ಥಾನಕ್ಕೆ ಬಿಟ್ಟ ಸ್ವಾಸ್ತಿಯಾದರೆ ಎರಡನೆಯದು ಕುಂದಾಪುರದ ಚೆಂನ್ನಕೇಶವ ದೇವರಿಗೆ ಬಿಟ್ಟ ಸ್ವಾಸ್ತಿಯನ್ನು ತಿಳಿಸುತ್ತದೆ. ಮೂರನೆಯದು ಕುಂದಾಪುರದಲ್ಲಿ ತಿಂಮ್ಮ ಶೇನುಬೋವನು ಕಟ್ಟಿಸಿದ ವಿಠ್ಠಲದೇವರ ಮಠಕ್ಕೆ ಬಿಟ್ಟ ಸ್ವಾಸ್ತಿಯದ್ದಾಗಿದೆ. ಕೊಂಕಣ ಮಠವೆಂದರೆ ಕೊಂಕಣಿಯವರ ಮಠ ಎಂದಿರಬಹುದು.

ನಿರೂಪ 1:

ರಉದ್ರಿ ಸಂವತ್ಸರದ। ಮಾರ್ಗಿಶಿರ ಶುದ್ಧ 3 ರಲ್ಲು ಶ್ರೀಮತು ಕೆಳದಿ ಚೆಂನ್ನಂಮಾಜಿಯವರು ಬಸಪ್ಪಯ್ಯಗೆ ಬರಶಿ ಕಳುಹ್ಸಿದ ಕಾರ್ಯಸೇಮಾರ ರಾಮಪ್ಪ। ತಿಂಮರ್ಸಯ। ಹಜೂರಿಗೆ ಬಂದು। ಮುಗುವಿನ ಶೀಮೆಯಲ್ಲು ರಾಮಪ್ಪ ಕಟ್ಟಿಸ್ತ ದೇವಸ್ತಾನಕ್ಕೆ ಸ್ವಸ್ತಿಯಲ್ಲು। ಕ್ರಯವ ಕೊಡುತೇನೆ ಪಾಲಿಶಿಕೊಳ್ಳಬೇಕುಯಂದು ಹೇಳಿಕೊಂಡ ಸಂಮಂಧಾ ಯಿತ್ತನ ಕೈಯಾ। ಗ ೧೭೫ ನೂರಾಯಪ್ಪತ್ತು ಅಯಿದು ವರಹಾಂನ್ನ ತೆಗೆದುಕೊಂಡು। ಬಿಟ್ಟ ಸ್ವಾಸ್ತಿ ಮುಗುವಿನ ಶೀಮೆವಳಗಣ। ಯೆಡಪಡಲ್ಲಿನ ಗ್ರಾಮದಲ್ಲು ನಾಗನ ತಿಂಮಾಮಿ ವರ್ಗದ ಭೂಮಿಯಿಂದ – ಗ ೧೧॥ ಚಕ್ರದ ಮಟದ ಸ್ವಾಸ್ತಿ। ಅರ್ಥಾ ನಿವಿಶಿದ ಬಗೆಯಲ್ಲು। ೧॥೧॥ ಯಿ ದೇವಸ್ಥಾನ ಕಟ್ಟಿದ ತೆಂಗಿನ ಮರನ ತೆರು । ಗಂ ॥ ೦/೦ ಅಂತು ಗ ೧೩ ॥೨ ಹದಿಮೂರು ವರಹಾಂನ್ನು ಯೇಳು ಗಣ ಬ್ಯಾಳೆ ಸ್ವಾಸ್ತಿ। ಆ ವೆಂಕಟೇಶದೆವರ ದೇವತಾ ವೆಚ್ಚಕ್ಕೆ ಶಿವಾರ್ಪಿತವಾಗಿ ಬಿಟ್ಟಿದೆ। . ರೆಖೆ ಪ್ರಮಾಣ ಭೂಮಿ ವಿಂಗಡಿಶಿ ಕೊಡುವುದು। ಯಿಾ ಭೂಮಿಗೆ ವಾಮನ ಮುದ್ರೆ ಶಿಲಾಸ್ತಾಪಿತ ಮಾಡಿ ಕೊಡುವ ಬಗ್ಯೆ ಹಜೂರಲ್ಲು ಯಿಹ। ಊಳಿಗದ ಲಿಂಗನ ಕಳುಹಿ ಅದೆ ಯಿಾತನ ಮುಂತಿಟ್ಟು ಚಉಗ್ರಾಮದವರ। ಕರಶಿಕೊಂಡು ಗಡಿ ನಿಗದಿ ತತ್ವಾರ ಬಾರದ ರೀತಿ ಸ್ತಳದ ಶ್ಯಾನಭೋವನ। ಕೈಯಾ ಚಪ್ಪು ಬರೆಶಿಕೊಟ್ಟು ವಾಮನ ಮುದ್ರೆ। ಶಿಲಾಸ್ತಾಪಿತ ಮಾಡಿಶಿ ಆ ವಿವರಕ್ಕೆ ಹಜೂರಿಗೆ ಬರೆಯುವುದು ಯಿಾ ಕಾಗದ ಶ್ಯಾನಭೋವನ ಕಡಿತಕ್ಕೆ ಬರೆಶಿ ತ್ತಿರುಗಾ। ಯಿಾತನ ಕೈಯಲ್ಲಿ ಕೊಡುವುದು ಬರೆದು ಬಂದ ನಿರೂಪು ಪ್ರತಿ.

ರೌದ್ರಿ ಸಂವತ್ಸರದ ಮಾರ್ಗಶಿರ ಶುದ್ಧ 3 ರಲ್ಲು ಶ್ರೀಮತ್ ಕೆಳದಿ ಚೆನ್ನಮ್ಮಾಜಿಯು ಬಸಪ್ಪಯ್ಯಗೆ ಬರೆಸಿ ಕಳುಹಿಸಿದ ಕಾರ್ಯ – ಸೇಮಾರ ರಾಮಪ್ಪ, ತಿಮ್ಮರಸಯ್ಯ ಹಜೂರಿಗೆ ಬಂದು ರಾಮಪ್ಪನು ತಾನು ಮುಗುವಿನ ಶೀಮೆಯಲ್ಲಿ ಕಟ್ಟಿಸಿರುವ ದೇವಸ್ಥಾನಕ್ಕೆ ಸ್ವಸ್ತಿಯಿಲ್ಲವಾದ್ದರಿಂದ ಕ್ರಯವನ್ನು ಕೊಡುವೆನು ಪಾಲಿಸಿಕೊಳ್ಳಬೇಕೆಂದು ಕೇಳಿಕೊಂಡ ಸಂಬಂಧಾ, ಅವನ ಬಳಿ ಗ। ೧೭೫। ನೂರಾಯೆಪ್ಪತ್ತೈದು ವರಾಹಗಳನ್ನು ತೆಗೆದುಕೊಂಡು ಬಿಟ್ಟ ಸ್ವಾಸ್ತಿ – ಮುಗುವಿನ ಸೀಮೆಯಲ್ಲಿನ ಯಡಪಡಲ್ಲಿನ ಗ್ರಾಮದಲ್ಲಿನ ನಾಗನ ತಿಂಮಾಮಿ ವರ್ಗದ ಭೂಮಿಯಿಂದ – ಗ ೧೧॥ ಚ-ಕ್ರ-ದ ಮಟದ ಸ್ವಾಸ್ತಿ ಅರ್ಥಾ ನಿವಿಶಿದ ಬಗೆಯಲ್ಲಿ ೧೧॥೧॥ = ಈ ದೇವಸ್ಥಾನ ಕಟ್ಟಿದ ತೆಂಗಿನ ಮರನ ತೆರು । ಗಂ ॥ ೦/೦ ಅಂತು । ಗ ೧೩ ॥೨ = ಹದಿಮೂರು ವರಹಾಂನ್ನು ಯೇಳುಗಣ ಬ್ಯಾಳೆ ಸ್ವಸ್ತಿಯನ್ನು ಆ ವೆಂಕಟೇಶ ದೇವರ ದೇವತಾ ವೆಚ್ಚಕ್ಕೆ ಶಿವಾರ್ಪಿತವಾಗಿ ಬಿಟ್ಟಿದ್ದೇವೆ, ರೇಖೆ ಪ್ರಮಾಣ ಭೂಮಿ ವಿಂಗಡಿಸಿ ಊಳಿಗದ ಲಿಂಗನ ಕಳುಹಿಸಿ ಚಉಗ್ರಾಮದವರ ಕರೆಸಿಕೊಂಡು ಗಡಿ ವಿವಾದ (ತತ್ವಾರ) ಬಾರದ ಹಾಗೆ ರಾಮಪ್ಪನ ಮುಂದಿಟ್ಟು ವಾಮನ ಮುದ್ರೆ ಶಿಲಾಸ್ತಾಪಿಸಿ ಅದಕ್ಕೆ ಶ್ಯಾನುಬೋಗನ ಕೈಯಾ ಚಪ್ಪು ಬರೆಸಿಕೊಟ್ಟು, ಕಡಿತಕ್ಕೆ ಬರೆಸಿ ರಾಮಪ್ಪನಿಗೆ ಕೊಟ್ಟು ಈ ಕಾರ್ಯದ ವರದಿಯನ್ನು ಹಜೂರಿಗೆ ಬರೆದು ತಿಳಿಸುವುದು.

ಈ ವಿಷಯಕ್ಕೆ ಸಂಬಂಧಿಸಿದಂತೆ ಕೆ.ಜಿ. ವಸಂತ ಮಾಧವರವರು ತಮ್ಮ ಗ್ರಂಥದಲ್ಲಿ[2] ಕೆಳದಿ ಚೆನ್ನಮ್ಮಾಜಿಯು ರಾಮ ಪೈ ಕಟ್ಟಿಸಿದ ವೆಂಕಟರಮಣ ದೇವಸ್ಥಾನಕ್ಕೆ ಹದಿಮೂರು ವರಾಪ ದಾನ ಕೊಟ್ಟಿರುವಳೆಂದು ತಿಳಿಸಿರುವರು. ಅವರು ನಿರೂಪವನ್ನು ಕೊಟ್ಟಿಲ್ಲ.

ನಿರೂಪ – 2

೧೦೨॥ ರಕ್ತಾಕ್ಷಿ – ಸಂವತ್ಸರ ಮಾರ್ಗಶಿರ ಶು॥ ೭ ಲ್ಲು ಶ್ರೀಮತ್ಕೆಳದಿ ಚೆಂನಮ್ಮಾಜಿಯವರು ಶಿದ್ದ ಬಸಪ್ಪಯ್ಯಗೆ ಬರಶಿಕಳುಹಿದ। ಕಾರ್ಯ ಕುಂದಾಪುರದಲ್ಲು ದೇವಸ್ತಾನದ ಕಟ್ಟಿಶಿ। ಪ್ರತಿಷ್ಠೆ ಮಾಡಿದ। ಚೆಂನ್ನಕೇಶವ ದೇವರಿಗೆ। ಸ್ವಾಸ್ತಿಯಿಲ್ಲಾ। ಮುಗುವಿನ ಶೀಮೆ। ಮುಡಕುದುರಿ। ಕಮ್ಮರ ಕೊಡಲ್ಲು। ಕಂಚ–ಗೌಡ ಊಂಣಲಾಡಿ। ಕೋಡಿಗ್ರಾಮದಲ್ಲಿ ಸಹಾ ಪ್ರಾಕು ನಷ್ಟಕ್ಕೆ ಕಳದ ಭೂಮಿ। ಅಧೆ ಪಾಲಿಶಿಕೊಂಡರೆ। ಆ ಭೂಮಿಯಲ್ಲಿ ತೆಂಗಿನ ಸಶಿ ಬಾಳೆ ಹಾಕಿಶಿ ಸಾಗು ಮಾಡಿ ದೇವತಾ ಶೇವೆ। ನಡಶಿಕೊಂಡು ಬಂದೆನೆಂದು ರಾಯನು ಹೇಳಿಕೊಂಡ। ಸಂಮಂಧಾ ಬಿಟ್ಟ ಸ್ವಾಸ್ತಿ ಮುಗುವಿನ ಶೀಮೆಯಿಂದಾ। ಪ್ರಾಕುಕಳೆದ। ನಷ್ಟದಿಂದಾ। ಮುಂಡಕುಮ ಆ ಗ್ರಾಮದಿಂದ ।ಗ೯೨।೦ ಚೆಂನ ಕಮರಿಯಲ್ಲು। ಗ೯೯೦ ಉಭಯಂ ।ಗ೪೯೨। ಕಂಮರ ಕೊಡಲ್ಲು ಗ್ರಾಮದಿಂದಾ ।ಗ೩೯೧ ಕಂಚಗೌಡ ಗ್ರಾಮದಿಂದಾ। ಗ೭॥೧॥ ಅಂಣಲಾಡಿ ಗ್ರಾಮದಿಂದಾ। ಚಕ್ರಸಾನಂತನ ಸ್ವಾಸ್ತಿಯಲ್ಲು ಗ ೩॥೩೦1 ಅಂತು ।ಗ೧೮11 3 = ಹದಿನೆಂಟು ವರಹಾಂನು ಯೆಂಟು ಹಣ ಬೇಳೆ ಸ್ವಾಸ್ತಿಯಂನು ದೇವತಾ ಪೆಚಕ್ಕೆ ಶಿವಾರ್ಪಿತವಾಗಿ ಬಿಟ್ಟೆಲಾ / ಸಸಿ ಬಾಳೆ ಮುಂತಾಗಿ ಸಾಗು ಮಾಡಿಕೊಂಡು ಅದ ಹುಟ್ಟುವಳಿ ಆದಾಯ ವೆಚ್ಚದಿಂದಾ। ದೇವತಾ ಶೇವೆಯಂನ್ನು ಸಾಂಗವಾಗಿ ನಡೆಶಿ ಬಾಹಾಗೆ ಕಟ್ಟು ಮಾಡಿ ಯಿದೆವೆ। ರೇಟೆ ಪ್ರಮಾಣು ಭೂಮಿಯಂನು ವಿಂಗಡಿಶಿಕೊಟ್ಟು ಯಿಾ ಕಾಗದ ಶೇನಬೊವನ ಕಡಿತಕ್ಕೆ ಬರಶಿ ತಿರುಗಾ ಯಿಾತನ ವಶಕ್ಕೆ – ಕೊಡಿಶಿ ಕೊಡುವುದು ಯಂದು ಬರದ ಸಿರೂಪು ಪ್ರತಿ॥

ರಕ್ತಾಕ್ಷಿ ಸಂವತ್ಸರದ ಮಾರ್ಗಶಿರ ಶುದ್ಧ ರಲ್ಲು ಶ್ರೀಮತ್ ಕೆಳದಿ ಚೆನ್ನಮ್ಮಾಜಿಯವರು ಶಿದ್ದ ಬಸಪ್ಪಯ್ಯನಿಗೆ ಬರೆಸಿ ಕಳುಹಿದ ಕಾರ್ಯ – ಕುಂದಾಪುರದಲ್ಲಿ ಚೆನ್ನಕೇಶವ ದೇವರಿಗೆ ದೇವಸ್ಥಾನವ ಕಟ್ಟಿಸಿ ಪ್ರತಿಷ್ಠೆ ಮಾಡಿದ್ದು ಅದಕ್ಕೆ ಸ್ವಾಸ್ತಿಯಿಲ್ಲದ ಕಾರಣ, ಮುಗುವಿನ ಸೀಮೆ ಮುಡಕುದರಿ ಕಂಮ್ಮರ ಕೊಡಲು ಕಂಚಗೌಡ ಊಂಣಲಾಡಿ, ಕೋಡಿ ಗ್ರಾಮದಲ್ಲಿ ಪ್ರಾಕು ನಷ್ಟಕ್ಕೆ ಕಳೆದ ಭೂಮಿಯಿದ್ದು, ಅದ ಪಾಲಿಸಿಕೊಂಡು, ಆ ಭೂಮಿಯಲ್ಲಿ ತೆಂಗಿನ ಸಸಿ, ಬಾಳೆ ಹಾಕಿಸಿ ಸಾಗು ಮಾಡಿಕೊಂಡು ದೇವತಾ ಸೇವೆ ಮಾಡಿಕೊಂಡು ಬರುವೆನೆಂದು ಕೇಳಿಕೊಂಡ ಸಂಬಂಧ ಅದರಲ್ಲಿ ಸಸಿ ಬಾಳೆ ಮುಂತಾಗಿ ಸಾಗುಮಾಡಿಕೊಂಡು ಅದ ಹುಟ್ಟುವಳಿ ಆದಾಯದಿಂದ ದೇವತಾ ಸೇವೆಯನ್ನು ಸಾಂಗವಾಗಿ ನಡೇಸಿಕೊಂಡು ಬರುವಂತೆ ಅದನ್ನು ಚೆನ್ನಕೇಶವ ದೇವರಿಗೆ ಸ್ವಾಸ್ತಿ ಬಿಡಲಾಗಿದೆ. ಇದನ್ನು ರೇಖೆ ಪ್ರಮಾಣ ಭೂಮಿಯನ್ನು ವಿಂಗಡಿಸಿಕೊಟ್ಟು ಶಾನುಬೋಗನ ಕಡತಕ್ಕೆ ಬರೆಸಿ ಅದನ್ನು ರಾಯನಿಗೆ ಕೊಡುವುದು.

ನಿರೂಪ – 3

೧೦೩॥ ಪರಿಧಾವಿ ಸಂವತ್ಸರದ ಭಾದ್ರಪದ ಬಹುಳ ೧೦ರಲ್ಲು ಶ್ರೀಮತ್ಕೆಳದಿ ಸೋಮಶೇಖರ ನಾಯಕರು। ಗಣಪ್ಪಗೆ ಬರಶಿ ಕಳುಹಿದ ಕಾರ್ಯ – ಕುಂದಾಪುರದ ತಿಂಮ್ಮ ಶೇನುಬೊವನು ಹಜೂರು ಬಂದು ತಾನು ಕುಂದಾಪುರದಲ್ಲು ಮಠ ಕಟ್ಟಿಸಿ। ವಿಠ್ಠಲದೇವರ ಯಿಟ್ಟು ಪೂಜೆ ಮಾಡುವ ಹಾಗೆ ಮಾಡಿಯಿದ್ದೆನೆ। ಸ್ವಾಸ್ತಿಯಿಲ್ಲ ಕ್ರಯವ ಕೊಟ್ಟೆನು। ಯಿಾ ದೇವರ ದೇವತಾ ವೆಚ್ಚಕ್ಕೆ ತಾನು ಮಾಡುವ ಅರವಟಿಗೆ। ಧರ್ಮದ ಬಗ್ಗೆ ಸಹಾ। ಸ್ವಾಸ್ತಿ ವುತ್ತರವಾ ಕೊಡಬೇಕೆಂದು ಹೇಳಿಕೊಳ್ಳುತ್ತಾನೆ. ಆ ರೀತಿ ಅಪ್ಪಣೆ ಆಗಬೇಕೆಂದು ನಿರ್ವಾಣಯ್ಯ ಮಾವನವರು ಹೇಳಿದ ಸಂಮಂದ ಯಿಾ ತಿಂಮಣ್ಣ ಶೇನುಬೊವನ ಕೈಯಾಕ್ರಯವ।ಗ೪೯೩।ಮುಂನೂರ ತೊಂಬತ್ತು ಯೇಳುವರೆ ವರಹಾಂನು ಅರಮನಿಗೆ ತೆಗೆದುಕೊಂಡು। ಉತ್ತಾರ ಕೊಟ್ಟದ್ದು ಬಾರಕೂರು – ಹೊಬ್ಬಳ್ಳಿ ಕರಣೀಕರು ಬರಶಿದ ಪ್ರಮಾಣ । ಯಿಾ ಹೊಬ್ಬಳ್ಳಿ ಬಳಿ ಸಾವಿರದ ಮಾಗಣ ಶಿರುವದ ಹೊಬ್ಬಳ್ಳಿ ವಳಗಣ। ಮತಾರ ಗ್ರಾಮದಿಂದಾ ರೇಖೆ। ಗ ೩೨[illegible]। ವಿಂಗಡದಿಂದಾ ಮಾಣಿಬೆಟ್ಟನ ಗ್ರಾಮದ ಶಿಸ್ತಿನಿಂದಾ । ಗ೧[illegible] ಉಭಯಂ। ಗ ೩೨[illegible]॥= ಪ್ರಾಕಾರ ಭವ್ಯ ರಾಡಿಸಿ ಬರುತ್ತಿದ್ದ ಬಗೇ ಯಿಾಗ ಹೆಚ್ಚಿದು ಗ ೧ ಉಭಯಂ । ಗ೩[illegible] ಶಿರುಮದ ಗ್ರಾಮದಿಂದಾ। ಬಗ್ಗಾಳಬೆಮ್ಮರ್ಕಂಪ್ರುಣೆಯವ ಭೂಮಿಯಿಂದಾ। ಸಿಸ್ತಿನಿಂದಾ ।ಗ। ೫[illegible]೧॥ ಪ್ರಾಕಾರ ಭವ್ಯರಾಡಿಶಿ ಬರುತಿದ್ದ ಬಗೇ ಯಿಾ ಗದ್ದೆರಗೆದು [illegible]೧ ಉಭಯಂ। ಗ೫[illegible]॥ ಉಭಯಂ ।ಗ ೩೯॥೧॥ = ಚೆಂನವೀರಪ್ಪನ ಮಟದ ಬಗೆ ಹುಟುವಳಿ ಮೇಲೆ ವರಾಡ್ಸಿ ಕೊಟ್ಟು ಬಂದೆವೆಂದು ।

ಪ್ರಜೆ ಗಳು ಬರಕೊಟ್ಟ ಪಟ್ಟೆ। ಪ್ರಮಾಣಿಗೆ ಯಿಾ ಗ್ರಾಮ ದಿಂದಾ ಬರುತ್ತಿದ್ದ ಬಗೇ ಯಿಾಗ ಹೆಚ್ಚಿದ್ದು ೬॥ = ಉಭಯಂ। ಗ೩೯॥೨॥ ಕೆ ವಿವರಾ। ಪ್ರಾಕು ಶಿಸ್ತುನಿಂದಾ । ಗ೩೮॥೦೦॥ = ವರಾಹಿನ ಬರುತಿದ್ದ ಬಗೆಉ ಯಿಾಗಾ ಹೆಚ್ಚಿದು। ಗ ೧೪೦ ॥ – ಉಭಯಂ। ಗ ೩೯॥೨॥ ಮೂವತ್ತೊಂಬತ್ತು ವರಹಾಂನ ಯೇಳು ಹಣ ಅಡದ ಸ್ವಾಸ್ತಿಯಂದು। ಯಿಲ್ಲಿದ ಶೇನಬೊವನು ಕುಂದಾಪುರ ದಲ್ಲು। ಕಟ್ಟಿಸಿದ ಮಟದ ವಿಟಲದೇವರ ದೇವತಾ ವೆಚ್ಚಕ್ಕೆ। ಯಿಾತ ಮಾಡುವ ಅರವಟಿಗೆ ಧರ್ಮದ ಬಗ್ಯೆ ಸಹಾ ಶಿವಾರ್ಪಿತವಾಗಿ ।ಕೊಟ್ಟು। ಯಿಾ ಭೂಮಿಗೆ ವಾಮನ ಮುದ್ರೆ ಶಿಲಾಸ್ಥಾಪಿತವ ಮಾಡಿಸು ವಲ್ಲಿಗೆ। ಹಜೂರಿಂದು ಊಳಿಗದ ಬಸವನ ಕಳುಹಿಸಿ ಥೆವ ಜು ಗ್ರಾಮದವರ ಕರಶಿಕೊಂಡು ಗಡಿ ತತ್ವಾರ ಬಾರಡ ರೀತಿ ಯಿವನ ಮುಂತಿಟ್ಟು ರೇಖೆ ಪ್ರಮಾಣ ಭೂಮಿಗೆ ಶಿಲಾಸ್ತಾಪಿತವ ಮಾಡಿಶಿಕೊಟ್ಟು। ಯಿಾ ಕಾಗದದ ಶೇನಬೊವನ ಕದಿತಕ್ಕೆ ಬರಶಿ ತಿರುಗಾ ಯಿಾತನ ವಶಕ್ಕೆ ಕೊಡುವದಾಗಿ ಯಂದು ಬರೆದ ಸಾಧನ ಪ್ರತಿ॥

ಪರಿಧಾವಿ ಸಂವತ್ಸರದ ಬಾದ್ರಪದ ಬಹುಳ 10ರಲ್ಲು ಶ್ರೀಮತ್ ಕೆಳದಿ ಸೋಮಶೇಖರ ನಾಯಕರು ಗಣಪ್ಪಗೆ ಬರೆಸಿ ಕಳುಹಿಸಿದ ಕಾರ್ಯ – ಕುಂದಾಪುರದ ತಿಂಮ್ಮ ಶಾನುಬೋಗನು ಹಜೂರು ಬಂದು ತಾನು ಕುಂದಾಪುರದಲ್ಲಿ ಕಟ್ಟಿಸಿದ ವಿಠ್ಠಲದೇ ವರ ಮಠಕ್ಕೆ ಸ್ವಾಸ್ತಿಯಿಲ್ಲದ ಕಾರಣ ಕ್ರಯವ ಕೊಡು ವೆನು ಅಲ್ಲದೆ ದೇವತಾ ವೆಚ್ಚಕ್ಕೆ ತಾನು ಮಾಡುವ ಅರವಟ್ಟಿಗೆ ಧರ್ಮದ ಬಗ್ಗೆಯು ಸಹಾ ಸ್ವಾಸ್ತಿ ಉತ್ತಾ ರವ ಕೊಡಬೇಕೆಂದು ಕೇಳಿಕೊಂಡಾಗ – ಆ ರೀತಿ ಅಪ್ಪಣೆಯಾಗಬೇಕೆಂದು ನಿರ್ವಾಣಯ್ಯ ಮಾವನವರು ಹೇಳಿ ಸಂಬಂಧ ತಿಂಮ್ಮಣ್ಣ ಶಾನುಬೋಗನಿಂದ ಮುನ್ನೂರಾ ತ್ತೊಂಬತ್ತೇಳುವರೆ ವರಾಹಗಳನ್ನು ಅರ ಮನೆಗೆ ತೆಗೆದುಕೊಂಡು ಉತ್ತಾರ ಕೊಟ್ಟದ್ದು – ಬಾರಕೂರು ಹೋಬಳಿ ಕರಣೀಕರು ಬರೆಸಿದ ಪ್ರಮಾಣ – ಈ ಹೋಬಳಿ ಸಾವಿರದ ಮಣಿ ಶಿರುವದ ಹೋಬಳಿಯಲ್ಲಿನ ಮತಾರ ಗ್ರಾಮದಿಂದ, ಮಾಣಿಬೆ ಟ್ಟದ ಗ್ರಮದ ಸಿಸ್ತಿನಿಂದಾ, ಪ್ರಾಕಾರ ಭವ್ಯರಾಡಿಸಿ ಬರುತ್ತಿದ್ದ ಬಗೆ ಈಗ ಹೆಚ್ಚಾಗಿದ್ದು, ಶಿರುವದ ಗ್ರಾಮ ದಿಂದ ಬಗ್ಗಾಳ ಬೆರ್ಮು ಕಂಪುಣೆಯವ ಭೂಮಿ ಯಿಂದಾ, ಸಿಸ್ತಿನಿಂದಾ, ಪ್ರಾಕಾರ ಭವ್ಯರಾಡಿಸಿ ಬರು ತ್ತಿದ್ದ ಬಗೆ ಈಗ ಹೆಚ್ಚಾಗಿದ್ದು, ಶಿರುವದ ಗ್ರಾಮದಿಂದ ಬಗ್ಗಾಳ ಬೆರ್ಮು ಕಂಪುಣೆಯವ ಭೂಮಿಯಿಂದಾ, ಸಿಸ್ತಿನಿಂದಾ, ಪ್ರಾಕಾರ ಭವ್ಯರಾಡಿಸಿ ಬರುತ್ತಿದ್ದ ಬಗೆ ಈಗ ಹೆಚ್ಚಾಗಿದ್ದು, ಚಂನವೀರಪ್ಪನ ಮಟದ ಬಗ್ಗೆ ಹುಟ್ಟುವಳಿ ಮೇಲೆ ಮಾಡಿಸಿಕೊಟ್ಟು ಬಂದೆ ವೆಂದು ಪ್ರಜೆಗಳು ಬರೆದುಕೊಟ್ಟ ಪ್ರಮಾಣಕ್ಕೆ ಈ ಗ್ರಾಮ ದಿಂದ ಬರುತ್ತಿದ್ದ ಬಗೆ ಈಗ ಹೆಚ್ಚಿದ್ದಕ್ಕೆ, ವಿವರ ಪ್ರಾಕು ಶಿಸ್ತಿ ನಿಂದಾ 38 ವರಾಹ ಬರುತ್ತಿದ್ದ ಬಗೆಯು ಈಗ ಹೆಚ್ಚಿದ್ದು, ಎಲ್ಲ ಸೇರಿ ಒಟ್ಟು ಮೂವತ್ತೊಂಬತ್ತು ವರಾಹ ಏಳು ಹಣ ಅಡದ ಸ್ವಾಸ್ತಿಯನ್ನು – ಇಲ್ಲಿಯ ಶಾನುಭೋಗನು ಕುಂದಾಪುರದಲ್ಲಿ ಕಟ್ಟಿಸಿದ ವಿಠಲದೇವರ ಮಠದ ದೇವತಾ ವೆಚ್ಚಕ್ಕೆ ಈತನು ಮಾಡುವ ಅರವಟ್ಟಿಗೆ ಧರ್ಮದ ಬಗ್ಗೆಯು ಶಿವಾರ್ಪಿ ತವಾಗಿ ಕೊಟ್ಟ ಈ ಭೂಮಿಗೆ, ಜಾಗ್ರಾಮವವರ ಕರೆ ಸಿಕೊಂಡು ಗಡಿವಿವಾದ (ತತ್ವಾರ) ಬರದ ಹಾಗೆ ಅವನ ಮುಂದಿಟ್ಟು ರೇಖೆ ಪ್ರಮಾಣ ವಿಂಗಡಿಸಿದ ಭೂಮಿಗೆ ವಾಮನ ಮುದ್ರೆ ಶಿಲಾಸ್ತಾಪಿಸಿ ಕೊಟ್ಟು, ಈ ಕಾಗದವನ್ನು ಶಾನುಬೋಗನ ಕಡತಕ್ಕೆ ಬರೆಶಿ ನಂತರ ಅವನ ವಶಕ್ಕೆ ಕೊಡುವುದು.

ಈ ವಿಷಯಕ್ಕೆ ಸಂಬಂಧಿಸಿದಂತೆ ಕೆ.ಜಿ. ವಸಂತ ಮಾಧವರವರು ತಮ್ಮ ಗ್ರಂಥದಲ್ಲಿ ತಿಳಿಸಿದ್ದು, ಅದರ ನಿರೂಪದ ಮೂಲ ಪಾಠವನ್ನು ಕೊಟ್ಟರುವಿದಿಲ್ಲ

ಕೆಳದಿ ಅರಸರಿಗೆ ಸಂಬಂಧಿಸಿದಂತೆ ಸುಮಾರು ಇನ್ನೂರಕ್ಕೂ ಹೆಚ್ಚು ನಿರೂಪಗಳು ಲಭ್ಯವಿದ್ದು, ಅವು ಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅರಸರು ದೇವ ಸ್ಥಾನ ಇತ್ಯಾದಿ ಧರ್ಮಕಾರ್ಯಗಳಿಗೆ ಬಿಟ್ಟ ಸ್ವಾಸ್ತಿಯ ಬಗ್ಗೆ ಹಾಗೂ ಅವರಿಗೆ ಎಲ್ಲ ಧರ್ಮಗಳಲ್ಲಿಯೂ ಇದ್ದ ಧರ್ಮಶ್ರದ್ಧೆಯ ಬಗ್ಗೆ ತಿಳಿದುಬರುತ್ತದೆ.

ಆಧಾರ ಗ್ರಂಥಗಳು

1. ಅಲ್ಫಾಬೆಟಿಕಲ್ ಲಿಸ್ಟ್ ಆಫ್ ಕನ್ನಡ ಮ್ಯಾನುಸ್ಕ್ರಪ್ಟ್ – (ಮೆಕಂಜೀಸ್ ಕಲೆಕ್ಷನ್ಸ್) ಜಿ.ಓ.ಎಂ.ಎಲ್, ಮದ್ರಾಸ್
2. ರಿಲೀಜನ್ಸ್ ಇನ್ ಕೋಸ್ಟಲ್ ಕರ್ನಾಟಕ – ಕೆ.ಜಿ. ವಸಂತ ಮಾಧವ 1500-1763 ಎ.ಡಿ
3. ಹಿಸ್ಟರಿ ಆಪ್ ದ ದಾಕ್ಷಿಣಾತ್ಯ ಸಾರಸ್ವತಾಸ್ – .ವಿ.ಎನ್. ಕುದ್ವಾ
4. ಕೆಳದಿ ಶಾಸನಗಳು ಸಾಂಸ್ಕೃತಿಕ ಅಧ್ಯಯನ (ಮಹಾ ಪ್ರಬಂಧ) ಡಾ॥ ಕೆ.ಜಿ. ವೆಂಕಟೇಶ ಜೋಯಿಸ್ (ಇದರ ಬರಹಕ್ಕೆ ಮಾರ್ಗದರ್ಶನ ಮಾಡಿದ ಗುಂಡಾ ಜೋಯಿಸರಿಗೂ ಡಾ॥ ಕೆ.ಜಿ ವೆಂಕಟೇಶ ಜೋಯಿಸರಿಗೂ ಲೇಖಕ ಕೃತಜ್ಞನಾಗಿದ್ದಾನೆ)